StudentBounty.com

3

Register Number | | | | | |

# Language — Part I — KANNADA — Paper I

Time Allowed : 3 Hours ] [ Maximum Marks : 100

I. ಈ ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ನಾಲ್ಕು ಸಾಲುಗಳಿಗೆ ಮೀರದಂತೆ ಉತ್ತರಿಸಿ : 4 × 2 = 8

1. ಭಗೀರಥನು ಏಕೆ ತಪಸ್ಸು ಮಾಡಿದನು ?
2. ಕರಿಯಪ್ಪನಿಗೆ ಸಂಸಾರ ದುರ್ಭರವೆನಿಸಲು ಕಾರಣವೇನು ?
3. ಗಿಯಾರ್ಡೋನೋ ಬ್ರೂನೋ ಎಂಬ ಖಗೋಳ ಶಾಸ್ತ್ರಜ್ಞನ ಬಾಳು ಹೇಗೆ ಕೊನೆಗೊಂಡಿತು ?
4. ಕವಿ ಪಂಪನು ಕನ್ನಡ ನಾಡಿನಲ್ಲೇ ಮರುಜನ್ಮ ಪಡೆಯಬೇಕೆಂದು ಏಕೆ ಆಶಿಸಿದನು ?
5. ಮನುಷ್ಯ ಹೇಗೆ ಅಂತರಂಗವನ್ನು ಶುದ್ಧಪಡಿಸಿಕೊಳ್ಳಬೇಕು ?
6. ದ್ರೌಪದಿಯ ಸ್ವಯಂವರದ ವಿಚಾರ ಪಾಂಡವರಿಗೆ ಹೇಗೆ ತಿಳಿಯಿತು ?

II. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಹತ್ತು ಸಾಲುಗಳಿಗೆ ಮೀರದಂತೆ ಉತ್ತರಿಸಿ :
3 × 4 = 12

1. ಹೂವರಳುವ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾರೆ ?
2. ನಾಗಿ ಬಿಕ್ಕಿ ಬಿಕ್ಕಿ ಅಳಲು ಕಾರಣವೇನು ?
3. ದೇವರ ಗುಡಿಯನ್ನು ನೋಡಿದಾಗ ಕವಿಗೆ ಯಾವ ಭಾವನೆ ಮೂಡಿತು ?
4. ಮನೆವಂತ ಒಳ್ಳೆಯವನಾದರೂ ಕವಿ ಮನೆ ಬಿಡಲು ಕಾರಣವೇನು ?
5. ಸಿಂಹವು ಕಪಟ ಬ್ರಾಹ್ಮಣನಿಗೆ ಏನು ಹೇಳಿತು ?

III. ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಹತ್ತು ಸಾಲುಗಳಿಗೆ ಮೀರದಂತೆ ಉತ್ತರಿಸಿ :
3 × 4 = 12

1. ದಲಿತರು ಜಾಗೃತರಾಗಿರಬೇಕೆಂಬ ವಿಚಾರ 'ಸಾವಿರಾರು ನದಿಗಳು' ಎಂಬ ಕವನದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ.
2. ಭರತ ಬಾಹುಬಲಿಯರೊಳಗೆ ನಡೆದ ಮಾತುಕತೆಯ ಸ್ವಾರಸ್ಯವನ್ನು ಬರೆಯಿರಿ.

[ Turn over

www.StudentBounty.com
Homework Help & Pastpapers

StudentBounty.com



3. ಮಯೂರಧ್ವಜನು ಯಜ್ಞವನ್ನು ನಿಲ್ಲಿಸಿ ಕೃಷ್ಣಾರ್ಜುನರನ್ನು ಕಾಣಲು ಏಕೆ ತವಕಿಸಿದನು ?

4. ಮಾದ್ರಿಯನ್ನು ಸೇರಿದ ಪಾಂಡುವಿಗಾದ ಅಂತ್ಯವನ್ನು ವಿವರವಾಗಿ ಬರೆಯಿರಿ.

5. 'ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ' ಎಂಬುದರ ಅಂತರಾರ್ಥವನ್ನು ವಿವರಿಸಿ.

6. ಗೌರಿಯು ಹೇಗೆ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡಳು ?

IV. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಇಪ್ಪತ್ತು ಸಾಲುಗಳಿಗೆ ಮೀರದಂತೆ ಉತ್ತರಿಸಿ : $1 \times 8 = 8$

1. ಮನುಷ್ಯನ ಪಾಪ ಪುಣ್ಯಗಳಿಗೂ ಮಳೆರಾಯನಿಗೂ ನಮ್ಮ ಜನ ಹೇಗೆ ಸಂಬಂಧವನ್ನು ಕಲ್ಪಿಸಿದ್ದಾರೆ ?

2. ಭಾವನಾ ವಾದಕ್ಕೆ ಊರುಗೋಲು ಧರ್ಮ, ಭೌತ ವಾದಕ್ಕೆ ಊರುಗೋಲು ವಿಜ್ಞಾನ ಎಂಬ ಹೇಳಿಕೆಯನ್ನು ಲೇಖಕರು ಹೇಗೆ ಸಮರ್ಥಿಸಿದ್ದಾರೆ ?

3. ಕುಡುಕ ಕರಿಯಪ್ಪನ ದಾರುಣ ಕತೆಯನ್ನು ವಿವರವಾಗಿ ಬರೆಯಿರಿ.

V. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಇಪ್ಪತ್ತು ಸಾಲುಗಳಿಗೆ ಮೀರದಂತೆ ವಿವರವಾಗಿ ಉತ್ತರಿಸಿ : $1 \times 10 = 10$

1. 'ಶಿಶಿರದ ಪಾಡು' ಕವನದ ಸಾಂಕೇತಿಕತೆಯನ್ನು ತಿಳಿಸಿ.

2. ಮಯೂರಧ್ವಜ ಮತ್ತು ಕಪಟ ಬ್ರಾಹ್ಮಣನಿಗೆ ನಡೆದ ಮಾತುಕತೆಗಳ ಸ್ವಾರಸ್ಯವನ್ನು ಬರೆಯಿರಿ.

3. ದುರ್ಯೋಧನನು ಶಲ್ಯನನ್ನು ಸಾರಥಿಯಾಗಲು ಒಪ್ಪಿಸಿದ ಸನ್ನಿವೇಶದ ಸ್ವಾರಸ್ಯವನ್ನು ವಿಶದಪಡಿಸಿ.

VI. ಈ ಪದ್ಯಗಳನ್ನು ಪೂರ್ತಿ ಮಾಡಿ : $2 \times 5 = 10$

1. ಮೂಡಲ ಮನೆಯಾ ..............................................

..................................................................

..................................................................

.................................... ಜಗವೆಲ್ಲಾ ತೊಯ್ದಾ.

2. ತುಪ್ಪದ ಸವಿಗೆ ..............................................

..................................................................

..................................................................

.................................... ನಿಮ್ಮ ಧರ್ಮ.

www.StudentBounty.com
Homework Help & Pastpapers

VII. ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ಸಂದರ್ಭ ಸಹಿತ ವಿವರಿಸಿ : 2 × 5 =

1. ಬದುಕಲೀತನ ಸುತಂ ಪೊಸತಾಗಲಿಳೆಗೆ.
2. ಬಳೆಗಾರವಸರದೊಳೆರಡಾನೆವೊಕ್ಕು ಹೋಕುಳಿಸಿದಂತೆ.
3. ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು.
4. ನಗೆ ಕೊಲ್ಲುವಂತೆ ಹಗೆ ಕೊಲ್ಲಲಾರದು.

VIII. A) ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ : 2 × 5 = 10

1. ಲೋಪ ಸಂಧಿ ಅಥವಾ ಗುಣ ಸಂಧಿಯನ್ನು ಉದಾಹರಣೆ ಸಹಿತ ವಿವರಿಸಿ.
2. ಕ್ರಿಯಾ ಸಮಾಸ ಅಥವಾ ಬಹುವ್ರೀಹಿ ಸಮಾಸವನ್ನು ಉದಾಹರಣೆ ಸಹಿತ ವಿವರಿಸಿ.
3. ದೀಪಕಾಲಂಕಾರ ಅಥವಾ ರೂಪಕಾಲಂಕಾರವನ್ನು ಉದಾಹರಣೆ ಸಹಿತ ವಿವರಿಸಿ.
4. ತ್ರಿಪದಿ ಅಥವಾ ಸಾಂಗತ್ಯವನ್ನು ಉದಾಹರಣೆ ಸಹಿತ ವಿವರಿಸಿ.

B) ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ : 5 × 1 = 5

| | | | |
|---|---|---|---|
| 1. | ಬೆಳಗು | — | ಆದಿಪುರಾಣ |
| 2. | ಸಾವಿರಾರು ನದಿಗಳು | — | ಗೋಪಾಲಕೃಷ್ಣ ಅಡಿಗ |
| 3. | ಭರತ ಬಾಹುಬಲಿ | — | ಸಿದ್ಧಲಿಂಗಯ್ಯ |
| 4. | ನಾವೆಲ್ಲರೂ ಒಂದೇ ಜಾತಿ | — | ರತ್ನಾಕರವರ್ಣಿ |
| 5. | ಕನ್ನಡದ ಮೊದಲ ಕಾವ್ಯ | — | ಅಂಬಿಕಾತನಯದತ್ತ |

IX. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : 15 × 1 = 15

1. 'ಕುಡುಕ ಕರಿಯಪ್ಪ' ಎಂಬ ಲೇಖನವನ್ನು ಬರೆದವರು

   ಅ) ಎಂ.ಎಸ್. ಸುಂಕಾಪುರ ಆ) ದೇವುಡು ಇ) ಕುವೆಂಪು

2. ಕನ್ನಡದ ಮೊದಲ ಕವಯಿತ್ರಿ

   ಅ) ತ್ರಿವೇಣಿ ಆ) ಅಕ್ಕಮಹಾದೇವಿ ಇ) ಸಂಚಿಯ ಹೊನ್ನಮ್ಮ

3. ಕನ್ನಡದ ಮೊದಲ ಕೃತಿ

   ಅ) ಆದಿಪುರಾಣ ಆ) ವಡ್ಡಾರಾಧನೆ ಇ) ಕವಿರಾಜಮಾರ್ಗ

4. ಕನ್ನಡದ ಆದಿಕವಿ

   ಅ) ಪಂಪ ಆ) ರನ್ನ ಇ) ಪೊನ್ನ

[ Turn over

StudentBounty.com

www.StudentBounty.com
Homework Help & Pastpapers

5. ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಕನ್ನಡ ಕವಿ

ಅ) ಮಾಸ್ತಿ ಆ) ಕುವೆಂಪು ಇ) ಬೇಂದ್ರೆ

6. ಕವೀಂದ್ರ ಎಂಬ ಪದವನ್ನು ಬಿಡಿಸುವುದು ಹೇಗೆ ?

ಅ) ಕವಿಯ + ಇಂದ್ರ ಆ) ಕವಿಯು + ಇಂದ್ರ ಇ) ಕವಿ + ಇಂದ್ರ

7. ಕಂಬನಿ ಎಂಬುದು ಯಾವ ಸಂಧಿ ?

ಅ) ಆದೇಶ ಆ) ಆಗಮ ಇ) ಲೋಪ

8. ಪಿತ್ರಾರ್ಜಿತ ಎಂಬುದು ಯಾವ ಸಂಧಿ ?

ಅ) ಜಶ್ತ್ವ ಸಂಧಿ ಆ) ಯಣ್ ಸಂಧಿ ಇ) ವೃದ್ಧಿ ಸಂಧಿ

9. ಮುಕ್ಕಣ್ಣ ಎಂಬುದು ಯಾವ ಸಮಾಸ ?

ಅ) ಕ್ರಿಯಾ ಸಮಾಸ ಆ) ದ್ವಿಗು ಸಮಾಸ ಇ) ಬಹುವ್ರೀಹಿ ಸಮಾಸ

10. ಹೆಬ್ಬಾಗಿಲು ಎಂಬುದು ಯಾವ ಸಮಾಸ ?

ಅ) ಕರ್ಮಧಾರಯ ಆ) ಅಂಶೀ ಇ) ದ್ವಂದ್ವ

11. ಉದ್ಯೋಗ ಎಂಬ ಪದದ ತದ್ಭವ ರೂಪ

ಅ) ಉದ್ಯಗ ಆ) ಉದ್ವೆಗ ಇ) ಉಜ್ಜುಗ

12. ಮುರಾಂತಕ ಎಂಬ ಪದದ ಅರ್ಥ

ಅ) ಶ್ರೀಕೃಷ್ಣ ಆ) ಅರ್ಜುನ ಇ) ಕರ್ಣ

13. ಲಕ್ಷ್ಮೀಶನ ಜನ್ಮಸ್ಥಳ

ಅ) ಧಾರವಾಡ ಆ) ದೇವನೂರು ಇ) ಕೋಳಿವಾಡ

14. 'ಚಿಕವೀರರಾಜೇಂದ್ರ' ಎಂಬ ಕಾದಂಬರಿಯನ್ನು ಬರೆದವರು

ಅ) ಮಾಸ್ತಿ ಆ) ಬೇಂದ್ರೆ ಇ) ಕುವೆಂಪು

15. ಸ್ವಾರ್ಥ ಎಂಬುದರ ವಿರುದ್ಧಾರ್ಥ

ಅ) ಅಸ್ವಾರ್ಥ ಆ) ನಿಸ್ವಾರ್ಥ ಇ) ಸ್ವಾರ್ಥರಹಿತ

StudentBounty.com
www.StudentBounty.com
Homework Help & Pastpapers